**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ**

CC No.:-502/2010

C.W.:-

P.W.:-1

ಸಾಕ್ಷಿದಾರರ ಹೆಸರು : ರೇಣಕಗೌಡ ಗಂಗಾಧರ ಪಾಟೀಲ

ವಯಸ್ಸು : 58 ವರ್ಷ

ಉದ್ಯೋಗ : ಎ.ಎಸ್.ಐ. ಸಂಕೇಶ್ವರ

ಸಾಕೀನ : ಸಂಕೇಶ್ವರ

ಸಾಕ್ಷಿಗೆ ಈ ದಿನ ದಿಃ 04-08-2021 ರಂದು ಪ್ರಮಾಣ ವಚನ ಬೋಧಿಸಲಾಯಿತು

ಭಾ.ದಂ.ಪ್ರ. ಸಂಹಿತೆ ಕಲಂ 299 ರ ಮೇರೆಗೆ ಸಾಕ್ಷಿಯ ವಿಚಾರಣೆಃ

ದಿನಾಂಕಃ 30-07-2018 ರಂದು ಮಾನ್ಯ ನ್ಯಾಯಾಲಯದಿಂದ ಹೊರಡಿಸಲಾದ ಉದ್ಘೋಷನೆಯನ್ನು ಪಡೆದುಕೊಂಡು ದಿನಾಂಕಃ 26-07-2018 ರಂದು ಮಹಾರಾಷ್ಟ್ರ ರಾಜ್ಯದ ಸಾಂಗೋಲಾ ತಾಲೂಕಿನ ಸಾಂಗೋಲಾ ಪೊಲೀಸ್ ಠಾಣಾ ವ್ಯಾಪ್ತಿಯ ಗಿರಡಿ ಉಪ ಠಾಣೆ ಯ ವ್ಯಾಪ್ತಿಯ ಗಿರಡಿ ಗ್ರಾಮದಲ್ಲಿ ಹಾಜರಾಗಿ ಆರೋಪಿ ನಂಃ 1 ಭೀಮರಾವ ಶಿವಪ್ಪ ಮೆಟಕರಿ, ಸಾಃ ಗಿರಡಿ ಇವರ ಮೇಲೆ ಹೊರಡಿಸಲಾದ ಉದ್ಘೋಷನೆಯನ್ನು ಜಾರಿ ಮಾಡುವ ಸಲುವಾಗಿ ನಾನು ಸದರಿ ಪೊಲೀಸ್ ಠಾಣಾ ವ್ಯಾಪ್ತಿಯ ಪೊಲೀಸ್ ಸಿಬ್ಬಂದಿಯಾದ ದಯಾನಂದ ಹಜಾರೆ ಪೊಲೀಸ್ ರವರ ಸಹಾಯದೊಂದಿಗೆ ಪಂಚರನ್ನು ಪಂಚರಾಗಿ ಬರುವಂತೆ ಕೇಳಿಕೊಂಡಾಗ , ಸದರಿಯವರು ಪಂಚರಾಗಿ ಬರಲು ಒಪ್ಪಿ ಕೊಂಡಿದ್ದು , ಪಂಚರೊಂದಿಗೆ ಆರೋಪಿ ಮನೆಯ ಹತ್ತಿರ ಮಧ್ಯಾಹ್ನ 14-30 ಗಂಟೆ ಸಮಯದಲ್ಲಿ ಹೋಗಿದ್ದು, ಆರೋಪಿಯ ಮನೆಗೆ ಕೀಲಿ ಹಾಕಿತ್ತು. ದಾರಿಹೋಕರನ್ನು ವಿಚಾರಿಸಲಾಗಿ ಆರೋಪಿತರು ಎಲ್ಲಿದ್ದಾರೆಂದು ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ . ನಂತರ ಪಂಚರ ಸಮಕ್ಷಮ ಉದ್ಘೋಷನೆಯನ್ನು ಅವರ ಮನೆ ಬಾಗಿಲಿಗೆ ಅಂಟಿಸಿ ಜಾರಿ ಮಾಡಿರುತ್ತೇನೆ . ನಾನು ಸ್ಥಳದಲ್ಲಿ ಮಧ್ಯಾಹ್ನ 14-30 ರಿಂದ 14-45 ರ ತನಕ ಪಂಚರ ಹೇಳಿಕೆಯ ಮೇರೆಗೆ ಪಂಚನಾಮೆಯನ್ನು ಬರೆದಿರುತ್ತೇನೆ.

ನಂತರ ಉದ್ಘೋಷನೆಯನ್ನು ಸಾರ್ವಜನಿಕ ಸ್ಥಳದಲ್ಲಿ ಜಾರಿ ಮಾಡುವ ಸಲುವಾಗಿ ಸದರಿ ಗಿರಡಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಹಾಗೂ ಗ್ರಾಮ ಪಂಚಾಯತಿಯ ಕಾರ್ಯಾಲಯದ ಹತ್ತಿರ ಹೋಗಿ ಸುಮಾರು 15-30 ಗಂಟೆಗೆ ಹೋಗಿ ಅದೇ ಪೊಲೀಸ್ ಠಾಣೆ ವ್ಯಾಪ್ತಿಯ ಮಹಾಪತಿ ಕಾಂಬ್ಳೆ ಪೊಲೀಸ್ ಸಿಬ್ಬಂದಿಯವರ ಸಹಾಯದೊಂದಿಗೆ ಬಸ್ ನಿಲ್ದಾಣದ ಹತ್ತಿರ ನಿಂತಿದ್ದ ಸಲೀಂ ಜಲಾನಿ ಖಲೀಫ್ ಮತ್ತು ಸೂರಜ ಸಂದೀಪ ಸಲಗರ ರವರಿಗೆ ನ್ಯಾಯಾಲಯದ ಆದೇಶವನ್ನು ತೋರಿಸಿ ಪಂಚರಾಗಿ ಬರುವಂತೆ ಕೇಳಿಕೊಂಡಿದ್ದು , ಅವರು ಪಂಚರಾಗಿ ಬರಲು ಒಪ್ಪಿದ್ದರಿಂದ ನಾನು ಪಂಚರ ಸಮಕ್ಷಮ ಉದ್ಘೋಷನೆಯನ್ನು ಬಸ್ ನಿಲ್ದಾಣದ ಗೋಡೆಗೆ ಹಾಗೂ ಗ್ರಾಮ ಪಂಚಾಯತಿಯ ಕಾರ್ಯಾಲಯದ ನೋಟಿಸ್ ಬೋರ್ಡಿಗೆ ಅಂಟಿಸಿ ಜಾರಿ ಮಾಡಿರುತ್ತೇನೆ.

ಮತ್ತು ಅಕ್ಕ ಪಕ್ಕದ ಜನರಿಗೆ ವಿಚಾರಿಸಲಾಗಿ ಆರೋಪಿ ಎಲ್ಲಿ ಹೋಗಿದ್ದಾರೆಂದು ತಮಗೆ ಗೊತ್ತಿಲ್ಲ ಎಂದು ತಿಳಿಸಿದ್ದರಿಂದ ನಾನು ಸ್ಥಳದಲ್ಲಿ ಮದ್ಯಾಹ್ನ 15-30 ರಿಂದ 15-45 ರ ತನಕ ಪಂಚರ ಹೇಳಿಕೆಯ ಮೇರೆಗೆ ಅವರು ಮರಾಠಿಯಲ್ಲಿ ಹೇಳಿದ್ದನ್ನು ನಾನು ಕನ್ನಡದಲ್ಲಿ ತರ್ಜುಮೆ ಮಾಡಿ ಮಹಾಜರ ಬರೆದಿರುತ್ತೇನೆ ಮಹಾಜರಗೆ ಪೊಲೀಸ್ ಸಿಬ್ಬಂದಿ ಹಾಗೂ ಪಂಚರ ಸಹಿಗಳನ್ನು ಪಡೆದಿರುತ್ತೇನೆ. ನಂತರ ನಾನು ಮಹಾಜರ ಫೋಟೊ ಮತ್ತು ವರದಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಆರೋಪಿಯ ಮನೆಯ ಹತ್ತಿರ ಹೊರಡಿಸಲಾದ ಉದ್ಘೋಷನೆ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಬಸ್ ನಿಲ್ದಾಣ ಹಾಗೂ ಗ್ರಾಮ ಪಂಚಾಯತಿಯ ಹತ್ತಿರ ಹೊರಡಿಸಲಾದ ಉದ್ಘೋಷನೆ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಮೂರು ಫೋಟೊಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಕ್ರಮವಾಗಿ ನಿಪಿ 3 ರಿಂದ 5 ಎಂದು ಗುರುತಿಸಲಾಯಿತು. ವರದಿಯನ್ನು ನಿಪಿ 6 ಎಂದು ಗುರುತಿಸಲಾಯಿತು.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಿ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ.